**ದಿನಾಂಕಃ 18-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 5(ಎ) ಮತ್ತು 5(ಬಿ) ನೇ ಪ್ರತಿವಾದಿಗಳ ಪರ ಶ್ರೀ.ಪಿ.ಆರ್.ಕೆ.ವಕೀಲರಿಂದಃ**

ಸರ್ವೇ ನಂ.298 ರ ಕ್ಷೇತ್ರ 5 ಎಕರೆ 16 ಗುಂಟೆ ಜಮೀನು ಐದು ವರ್ಷಗಳವರೆಗೆ ಮಾತ್ರ ನಮಗೆ ಲಾವಣಿಯಾಗಿತ್ತು ಎಂದರೆ ಸರಿ. ಆ ಲಾವಣಿ ಅವಧಿ ಮುಗಿದ ನಂತರ ಸದರಿ ಸರ್ವೇ ನಂಬರನ ಜಮೀನಿನಲ್ಲಿ ಯಾವತ್ತೂ ಸಹ ನಾವು ಲಾವಣಿ ನಾಥೆಯಿಂದ ಕಬ್ಜಾದಲ್ಲಿ ಇರುವುದಿಲ್ಲ ಎಂದರೆ ಸರಿ. ಸದರಿ ಜಮೀನಿನ ಕಬ್ಜಾದಲ್ಲಿ ಇಲ್ಲದಿದ್ದರೂ ಸಹ ನಾವು ಭೂ-ನ್ಯಾಯ ಮಂಡಳಿಯಲ್ಲಿ ಆ ಜಮೀನಿನ ರೈತರು ಎಂದು ರೈತಾಪಿ ಹಕ್ಕಿಗೆ ಅರ್ಜಿ ಸಲ್ಲಿಸಿದ್ದೇವು ಎಂದರೆ ಸರಿ ಮುಂದುವರೆದು ಸಾಕ್ಷಿ ಸರಿಯಲ್ಲ ಎಂದು ನುಡಿಯುತ್ತಾರೆ. ಸಿದ್ದಪ್ಪ ಮತ್ತು ಸಿದ್ದಪ್ಪನ ಮಕ್ಕಳು ನಮ್ಮ ಕುಟುಂಬದ ಮೇಲೆ ವಿಶ್ವಾಸವನ್ನು ಹೊಂದಿದ್ದರು ಎಂದರೆ ಸರಿ. ಅದೇ ವಿಶ್ವಾಸದಿಂದ ಸದರಿ ಸಿದ್ದಪ್ಪ ಮತ್ತು ರೇವಣೆಪ್ಪ ಹಾಗೂ ಸಿದ್ದಬಸಪ್ಪ ರವರು ದಿಃ 24-07-1967 ರಂದು ಸರ್ವೇ ನಂ.298 ರ ಕ್ಷೇತ್ರ 5 ಎಕರೆ ಜಮೀನನ್ನು ರುದ್ರಗೌಡ ಗುರುನಗೌಡ ಪಾಟೀಲ ರವರಿಗೆ ಖರೀದಿ ಪತ್ರ ಬರೆದು ಕೊಟ್ಟಿದ್ದರು ಎಂದರೆ ಸಾಕ್ಷಿಯು ನಾಲ್ಕು ಸಾವಿರ ರೂಪಾಯಿ ಪಡೆದು ಕೊಂಡು ಬರೆದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸಿದ್ದಪ್ಪ, ರೇವಣೆಪ್ಪ ಹಾಗೂ ಸಿದ್ದಬಸಪ್ಪ ರವರು ಈ ಹಿಂದೆ ಸದರಿ ಜಮೀನನ್ನು ನಾವು ವಾಪಸ್ಸು ಬರೆದು ಕೊಟ್ಟಂತೆ ಮತ್ತೆ ಕೊಡುತ್ತಾರೆಂದು ಅವರು ತಿಳಿದಿದ್ದರು ಎಂದರೆ ಸರಿಯಲ್ಲ. ಸದರಿ ಜಮೀನು ಕೇವಲ ಸಿದ್ದಪ್ಪ, ರೇವಣೆಪ್ಪ ಹಾಗೂ ಸಿದ್ದಬಸಪ್ಪ ರವರಿಗೆ ಮಾತ್ರ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ಸಿದ್ದಪ್ಪನ ಇನ್ನಿತರ ಮಕ್ಕಳಾದ ಜಟ್ಟೆಪ್ಪ, ಉಜ್ಜಪ್ಪ ಮತ್ತು ಮರಿಸಿದ್ದಪ್ಪ ರವರ ಹಿಸ್ಸೆಯು ಸದರಿ ಜಮೀನಲ್ಲಿ ನಷ್ಟವಾಗಿರುವುದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ತಮ್ಮಲ್ಲಿ ದಾಖಲೆಗಳು ಇವೆಯೇ ಎಂದರೆ ದಾಖಲೆ ಇವೆ ಎಂದು ನುಡಿಯುತ್ತಾರೆ. ದಿಃ 24-07-1967 ರ ದಾಖಲೆ ಇದ್ದು ಅದರಲ್ಲಿ ಸಿದ್ದಪ್ಪ ಮತ್ತು ಮಕ್ಕಳು ಎಂದು ಬರೆದಿರುತ್ತಾರೆ ಎಂದು ನುಡಿಯುತ್ತಾರೆ ಅಲ್ಲದೇ ಬೇರೆ ದಾಖಲೆಗಳು ಇವೆ ಅವುಗಳನ್ನು ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ. ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲದಿದ್ದರೂ ಸಹ ದಾಖಲೆಗಳು ಇವೆ ಎಂದು ಸುಳ್ಳು ಹೇಳುತ್ತಿದ್ದು ಆ ಕಾರಣ ಸದರಿ ಖರೀದಿ ಪತ್ರ ಜಟ್ಟೆಪ್ಪ, ಉಜ್ಜಪ್ಪ ಮತ್ತು ಮರಿಸಿದ್ದಪ್ಪ ರವರಿಗೆ ಬಾಂಧಾಯಿಸುವುದಿಲ್ಲ ಎಂದರೆ ಸರಿಯಲ್ಲ. ಸಿದ್ದಪ್ಪ ತೀರಿಕೊಂಡ ನಂತರ ಅವರ ಮಕ್ಕಳು ವೈಮನಸ್ಸಿನಿಂದ ಬೇರೆ-ಬೇರೆಯಾಗಿ ವಾಸ ಮಾಡಲು ಆರಂಭಿಸಿದ್ದರು ಎಂದರೆ ಸಾಕ್ಷಿ ಹಿಸ್ಸೆ ತೆಗೆದುಕೊಂಡು ಬೇರೆ-ಬೇರೆ ವಾಸಮಾಡಲು ಪ್ರಾರಂಭಿಸಿದ್ದರು ಎಂದು ನುಡಿಯುತ್ತಾರೆ. ರೇವಣ್ಣಪ್ಪ ರವರು ಚಿಕ್ಕಕುರವತ್ತಿ

ಗ್ರಾಮದಲ್ಲಿ ಇದ್ದು ಮತ್ತು ಸಿದ್ದಬಸಪ್ಪ ರವರು ಬೇರೆ-ಬೇರೆ ಕಡೆ ಇರುತ್ತಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅವರಿಬ್ಬರು ಹಲಗೇರಿಯಲ್ಲಿ ಇರುತ್ತಿದ್ದರು ಎಂದು ನುಡಿಯುತ್ತಾರೆ. ರೇವಣಪ್ಪ ರವರು ಭೂ-ನ್ಯಾಯ ಮಂಡಳಿಯಲ್ಲಿ ಹಾಜರಾಗಿ ಹೇಳಿಕೆಯನ್ನು ಕೊಟ್ಟಿದ್ದರು ಎಂದರೆ ಸರಿ. ಸದರಿ ಹೇಳಿಕೆಯಲ್ಲಿ ಅವರು 3-4 ವರ್ಷಗಳಿಂದ ಅವರು ಊರಲ್ಲಿ ಇರಲಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ತಾವು ಹಡಗಲಿ ತಾಲ್ಲೂಕಿನ ಹೊಳಲು ಗ್ರಾಮದಲ್ಲಿ ವಾಸವಾಗಿರುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರೇವಣಪ್ಪ ತಮ್ಮ-ತಮ್ಮಲ್ಲಿ ವ್ಯಾಜ್ಯ ಇದ್ದು ತಾವು ಈಗ ಹೊಳಲದಲ್ಲಿ ಮಾವನ ಮನೆಯಲ್ಲಿ ಇರುವುದಾಗಿ ಹೇಳಿದ್ದರು ಎಂದರೆ ಸರಿಯಲ್ಲ. ಸದರಿಯವರು ಸದರಿ 5 ಎಕರೆ 16 ಗುಂಟೆ ಜಮೀನಿನಲ್ಲಿ ತಾವೇ ಕಬ್ಜಾದಲ್ಲಿ ಇದ್ದು ವಹಿವಾಟು ಮಾಡುತ್ತಿದ್ದೇವೆ ಎಂದು ಹೇಳಿಕೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ತಮ್ಮ ತಂದೆ 5 ವರ್ಷಗಳವರೆಗೆ ಜಮೀನನ್ನು ಲಾವಣಿಗಾಗಿ ಕೊಟ್ಟಿದ್ದರು ನಂತರದಲ್ಲಿ ತಾವೇ ಕಬ್ಜಾದಲ್ಲಿ ಇರುವುದಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಭೂ-ನ್ಯಾಯ ಮಂಡಳಿಯಲ್ಲಿ ಅಗಾವ ಲಾವಣಿ ಪತ್ರವನ್ನು ಹಾಜರು ಪಡಿಸಿರುತ್ತಾರೆ ಎಂದರೆ ಸರಿ. ನಾವು ಸದರಿ ಜಮೀನನ್ನು ದುಂಡಾವತ್ತಿಯಿಂದ ಸಾಗು ಮಾಡುತ್ತಿದ್ದಾಗಿ ಅರ್ಜಿ ಸಲ್ಲಿಸಿರುತ್ತಾರೆ ಎಂದು ಅವರು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸಿದ್ದಪ್ಪನ ಮಕ್ಕಳಿಗೆ ಲಾವಣಿ ಪತ್ರವಾಗಲೀ ಹಾಗೂ ಭೂ ನ್ಯಾಯ ಮಂಡಳಿಯ ಆದೇಶವಾಗಲಿ ಸಂಬಂಧ ಪಡುವುದಿಲ್ಲ ಎಂದರೆ ಸರಿಯಲ್ಲ. ಸದರಿ ಭೂ-ನ್ಯಾಯ ಮಂಡಳಿಯ ಮುಂದೆ ರೇವಣೆಪ್ಪನನ್ನು ಹೊರತು ಪಡಿಸಿ ಸಿದ್ದಪ್ಪನ ಉಳಿದ ಮಕ್ಕಳು ಹಾಜರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣ ಸದರಿಯವರಿಗೆ ಲಾವಣಿ ಪತ್ರ ಹಾಗೂ ಭೂ ನ್ಯಾಯ ಮಂಡಳಿಯ ಆದೇಶ ಬಾಂಧಾಯಿಸುವುದಿಲ್ಲ ಮತ್ತು ಅವರ ಹಕ್ಕಿಗೆ ಯಾವುದೇ ನಷ್ಟ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ಸದರಿ 3 ಮಕ್ಕಳ ಹಿಸ್ಸೆಯ ಹಕ್ಕು ಸದರಿ ಜಮೀನಿನಲ್ಲಿ ಮುಂದುವರೆದುಕೊಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಮೇಲಿನ ನಂಬುಗೆಯನ್ನು ದುರುಪಯೋಗ ಪಡಿಸಿಕೊಂಡು ಖರೀದಿ ಪತ್ರವನ್ನು ಮುಂದುವರೆಸಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. ಲಾವಣಿ ಪತ್ರವನ್ನು ದುರುಪಯೋಗ ಪಡಿಸಿಕೊಂಡು ಭೂ-ನ್ಯಾಯ ಮಂಡಳಿಯಿಂದ ಆದೇಶ ಪಡೆದು ಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣ-ತಮ್ಮಂದಿರು 5 ಎಕರೆ ಜಮೀನನ್ನು ಹಿಸ್ಸೆ ಮಾಡಿಕೊಂಡಿದ್ದೇವೆ ಎಂದ ಕಾಗದ ಪತ್ರವನ್ನು ಹುಟ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವೆ ಮಾಡುವ ಪೂರ್ವದಲ್ಲಿ ಸದರಿ ಜಮೀನನ್ನು ಬೇರೆ ಬೇರೆಯವರಿಗೆ 4 ಗುಂಟೆ 5 ಗುಂಟೆಯಂತೆ ಮಾರಾಟ ಮಾಡಿರುವುದಾಗಿ ದಾಖಲೆ ಹುಟ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅಣ್ಣ-ತಮ್ಮಂದಿರಲ್ಲಿ ವ್ಯಾಜ್ಯ ಉಂಟಾಗಿದೆ ಎಂಬುದನ್ನು ದುರಪಯೋಗ ಪಡಿಸಿಕೊಂಡು ಎಲ್ಲಾ ದಾಖಲೆಗಳನ್ನು ಹುಟ್ಟಿಸಿಕೊಂಡಿದ್ದೇವೆ

ಎಂದರೆ ಸರಿಯಲ್ಲ. ಆಸ್ತಿಯನ್ನು ಮಾರಾಟ ಮಾಡಲು ನಮಗೆ ಮಾಲ್ಕಿ ಹಕ್ಕು ಬಂದಿದ್ದೆ ಇಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಆ ಆಸ್ತಿ ಹೋಗಬಾರದು ಎಂದು ಸುಳ್ಳು ದಾಖಲೆಗಳನ್ನು ಹಾಜರು ಪಡಿಸಿ , ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದಪ್ಪ , ರೇವಣಪ್ಪ ಮತ್ತು ಸಿದ್ದಬಸಪ್ಪ ರವರು ನಮ್ಮ ಮೇಲೆ ಇಟ್ಟಂತಹ ನಂಬಿಕೆಯನ್ನು ದುರುಪಯೋಗ ಪಡಿಸಿಕೊಂಡು ದಾವಾ ಆಸ್ತಿ ನಮ್ಮದೇ ಎಂದು ಸಾಧಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.